-41-

# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್.ಉಪಲೋಕ್/ಬಿ.ಡಿ.-3625/2015/ಡಿಆರ್‌ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:16-10-2017.
17-10-2017

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ಎನ್. ದಯಾನಂದ, ವಾಸ: ಇಂದಿರಾನಗರ ಗ್ರಾಮ, ಕನಕಪುರ ತಾಲ್ಲೂಕು ಇವರು ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಎನ್. ದಯಾನಂದ, ವಾಸ: ಇಂದಿರಾನಗರ ಗ್ರಾಮ, ಕನಕಪುರ ತಾಲ್ಲೂಕು ಇವರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಮಹೆಬೂಬ್ ಪಾಷಾ, ಕರ ವಸೂಲಿಗಾರ, ಅರಕೆರೆ ಗ್ರಾಮ ಪಂಚಾಯತ್, ಕನಕಪುರ ತಾಲ್ಲೂಕು (2) ಅಧ್ಯಕ್ಷರು, ಅರಕೆರೆ ಗ್ರಾಮ ಪಂಚಾಯತ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು (3) ಶ್ರೀ ಕೃಷ್ಣಮೂರ್ತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕೋಡಿಹಳ್ಳಿ ಗ್ರಾಮ ಪಂಚಾಯತ್, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದಾಖಲಿಸಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

## 2. ದೂರಿನ ಸಂಕ್ಷಿಪ್ತ ವಿವರ:

1ನೇ ಎದುರುದಾರರಾದ ಶ್ರೀ ಮಹೆಬೂಬ್ ಪಾಷಾ, ಕರ ವಸೂಲಿಗಾರ ಇವರನ್ನು ಕೆಲಸದಿಂದ ಅಮಾನತ್ತುಗೊಳಿಸಲಾಗಿದೆ. ಶ್ರೀ. ಹೆಚ್.ಪಿ. ರಾಜು ಎನ್ನುವವರಿಂದ ರೂ.5,000/-ಗಳ ಲಂಚ ಪಡೆದು ಎದುರುದಾರರು ಅಮಾನತ್ತುಗೊಂಡಿದ್ದರು, ಆದರೆ ತನ್ನ ತಂದೆ ಅನ್ವರ ಪಾಷಾ ರವರು ಅರಕೆರೆ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿದ್ದ ವಿಷಯವನ್ನು ದುರುಪಯೋಗಪಡಿಸಿಕೊಂಡು ತನ್ನ ತಂದೆ ಹಾಲಿ ಸದಸ್ಯರಾಗಿರುವಾಗ ಬಿಲ್ ಕಲೆಕ್ಟರ್ ಆಗಿ ಮುಂದುವರೆಯುತ್ತಿದ್ದಾರೆ. ಎದುರುದಾರರು ಗ್ರಾಮ ಪಂಚಾಯತಿಯ ವ್ಯಾಪ್ತಿಯ ಎಲ್ಲಾ 15 ಗ್ರಾಮಗಳಿಂದ ಫಲಾನುಭವಿಗಳಿಂದ ಸಹಸ್ರಾರು ರೂಪಾಯಿಗಳನ್ನು ತಾವೇ ಹಿಡಿದುಕೊಂಡು ಉಳಿದ ಹಣ ಕೊಡುತ್ತಾರೆ. ಶೌಚಾಲಯ ನಿರ್ಮಾಣದಲ್ಲಿ ಗುತ್ತಿಗೆದಾರರಿಗೆ ಕೊಡುವ ಹಣದಲ್ಲಿ ಸಾಕಷ್ಟು ಹಣ ಮಾಡಿಕೊಂಡಿದ್ದು ಅಮಾನತ್ತುಗೊಂಡಿದ್ದರೂ ಸಹ ಪಂಚಾಯತಿಯಲ್ಲಿ ಬೆಳಿಗ್ಗೆ

2-

೯-೦೦ ರಿಂದ ಬಂದು ಸೀಟಿನಲ್ಲಿ ಕುಳಿತು ಪಂಚಾಯತಿ ಕೆಲಸದಲ್ಲಿ ಹಸ್ತಕ್ಷೇಪ ಮಾಡುತ್ತಾರೆ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

೩. 1ನೇ ಎದುರುದಾರರು ಹಂಗಾಮಿ ಬಿಲ್ ಕಲೆಕ್ಟರ್ ಆಗಿದ್ದರು. ಅವರಿಗೆ ಕೆ.ಸಿ.ಎಸ್.ಆರ್. ನಿಯಮಾವಳಿಗಳು ಅನ್ವಯಿಸುವುದಿಲ್ಲ ಅಂತ ಅಭಿಪ್ರಾಯಪಟ್ಟು, ಮೂಲತಃ ಸಿ.ಇ.ಓ., ಜಿಲ್ಲಾ ಪಂಚಾಯತ್ ರಾಮನಗರ ಇವರಿಗೆ ಗೌರವಾನ್ವಿತರ ಆದೇಶದಂತೆ ತನಿಖೆಗಾಗಿ ವಹಿಸಲಾಗಿದೆ.

೪. ಸಿ.ಇ.ಓ., ಜಿಲ್ಲಾ ಪಂಚಾಯತ್ ರಾಮನಗರ ಇವರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕನಕಪುರ ಇವರಿಗೆ ತನಿಖೆಗಾಗಿ ಪ್ರಕರಣವನ್ನು ವಹಿಸಿರುತ್ತಾರೆ. ಹಲವಾರು ಸಲ ತನಿಖಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದರೂ ಸಹ ಕಾರ್ಯನಿರ್ವಾಹಕ ಅಧಿಕಾರಿಗಳು, ಯಾವುದೇ ವರದಿಯನ್ನು ಸಲ್ಲಿಸಲಿಲ್ಲ. ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಾಗಿ, ಗ್ರಾಮ ಪಂಚಾಯತ್ ಪಿ.ಡಿ.ಓ. ರವರು ಎದುರುದಾರರನ್ನು ಅಮಾನತ್ತುಗೊಳಿಸಿದ್ದರು, ಆದರೆ ಮುಂದಿನ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ ಗ್ರಾಮ ಪಂಚಾಯತಿಯು ಎದುರುದಾರರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ. ಆದ್ದರಿಂದ, ಅಧ್ಯಕ್ಷರು, ಅರಕೆರೆ ಗ್ರಾಮ ಪಂಚಾಯತ್ ಮತ್ತು ಪಿ.ಡಿ.ಓ. ಕೋಡಿಹಳ್ಳಿ ರವರನ್ನು 2 ಮತ್ತು 3ನೇ ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಳ್ಳಲಾಗಿದೆ.

೫. 2ನೇ ಎದುರುದಾರರಿಗೆ ಕಳುಹಿಸಿದ ನೋಟಿಸ್ ಅನ್ನು ಬಿಲ್ ಕಲೆಕ್ಟರ್‌ರವರೇ ತೆಗೆದುಕೊಂಡಿದ್ದಾರೆ, ಆದರೆ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ಆದ್ದರಿಂದ, ಪಿ.ಡಿ.ಓ. ಅರಕೆರೆ ಗ್ರಾಮ ಪಂಚಾಯತಿ, ಅಧ್ಯಕ್ಷರು, ಅರಕರೆ ಗ್ರಾಮ ಪಂಚಾಯತಿ ಇವರನ್ನು ಖುದ್ದು ಹಾಜರುಪಡಿಸಕೊಳ್ಳಲಾಗಿದೆ. ಆದರೆ ಪಿ.ಡಿ.ಓ. ಅಥವಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬಿಲ್ ಕಲೆಕ್ಟರ್ ರವರ ನೇಮಕಾತಿ ಸಿ.ಇ.ಓ. ಜಿಲ್ಲಾ ಪಂಚಾಯತ್ ರವರ ಪೂರ್ವಾನುಮತಿಯನ್ನು ಪಡೆದುಕೊಂಡು ಮಾಡಲಾಗಿದೆಯೇ ಎನ್ನುವ ಬಗ್ಗೆ ಯಾವುದೇ ವರದಿಯನ್ನು/ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

೬. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 113 ರಲ್ಲಿ ಗ್ರಾಮ ಪಂಚಾಯತಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮತಿಯೊಂದಿಗೆ ಪಂಚಾಯತಿಯಲ್ಲಿ ಉಳಿದ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬಹುದು ಮತ್ತು ಅಂತಹ ಸಿಬ್ಬಂದಿಗಳ ಸಂಭಳವನ್ನು ಗ್ರಾಮ ಪಂಚಾಯತಿಯ

ಫಂಡ್‌ದಿಂದ ಕೊಡಬಹುದು ಅಂತ ವಿಧಿಸಲಾಗಿದೆ. ಗ್ರಾಮ ಪಂಚಾಯತಿಯು ಅಂತಹ ಸಿಬ್ಬಂದಿಗಳ ರ್‍ಯಾಂಕ್ ಕಡಿಮೆ ಮಾಡಬಹುದು, ಕೆಲಸದಿಂದ ತೆಗೆಯಬಹುದು, ವಜಾ ಮಾಡಬಹುದು. ಈ ರೀತಿಯ ಆದೇಶಗಳಾದಾಗ ಕಾರ್ಯನಿರ್ವಾಹಕ ಅಧಿಕಾರಿಗಳ ಮುಂದೆ ಅಪೀಲ್ ಅನ್ನು ಸಲ್ಲಿಸಬಹುದು ಮತ್ತು ಸಿ.ಇ.ಓ. ರವರ ಮುಂದೆ ನೇಮಕಾತಿ ರದ್ದುಗೊಳಿಸಿದ ಅಥವಾ ಕೆಲಸದಿಂದ ತೆಗೆದು ಹಾಕಿದ ವಿಷಯದಲ್ಲಿ ಅಪೀಲು ಸಲ್ಲಿಸಬಹುದು ಅಂತ ವಿಧಿಸಲಾಗಿದೆ.

7. ಈ ಪ್ರಕರಣದಲ್ಲಿ ಮೆಹಬೂಬ್ ಪಾಷಾ ಎನ್ನುವ 1ನೇ ಎದುರುದಾರರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮತಿ ಪಡೆದಿರುವುದಿಲ್ಲ. ದಿನಾಂಕ: 16-6-2015 ರಂದು ಶ್ರೀ ಹೆಚ್.ಪಿ. ರಾಜು ಇವರ ಖಾತೆ ಬದಲಾವಣೆ ಮಾಡಲು ರೂ.5,000/- ಗಳ ಲಂಚ ಪಡೆದಿರುವ ವಿಷಯದಲ್ಲಿ 1ನೇ ಎದುರುದಾರರಿಂದ ಸಮಜಾಯಿಸಿಯನ್ನು ಕೇಳಲಾಗಿದೆ, ಆದರೆ ಸಮಜಾಯಿಸಿ ಕೊಡದೇ ಇದ್ದುದ್ದರಿಂದ, ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ತೀರ್ಮಾನದವರೆಗೆ 1ನೇ ಎದುರುದಾರರನ್ನು ಅಮಾನತ್ತಿನಲ್ಲಿಟ್ಟು ಪಿ.ಡಿ.ಓ. ರವರು ಆದೇಶವನ್ನು ಹೊರಡಿಸಿದ್ದಾರೆ ಹಾಗೂ ಈ ಬಗ್ಗೆ ತಾಲ್ಲೂಕು ಪಂಚಾಯತ್ ಕನಕಪುರ ಇವರಿಗೂ ಸಹ ತಿಳಿಸಲಾಗಿದೆ. ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ಈ ವಿಷಯ ಬಂದಿರುತ್ತದೆ. ದಿನಾಂಕ: 14-9-2015 ರಂದು ಶ್ರೀಮತಿ ಸರೋಜಮ್ಮ ಇವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಸಿ 1ನೇ ಎದುರುದಾರರಾದ ಬಿಲ್ ಕಲೆಕ್ಟರ್ ಇವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಈ ರೀತಿ ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಸಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆದಿರುವುದಿಲ್ಲ. 2 ಮತ್ತು 3ನೇ ಎದುರುದಾರರು ಸೂಕ್ತವಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳದೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 113 ಅನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

8. 1ನೇ ಎದುರುದಾರರು ಅರಕೆರೆ ಗ್ರಾಮ ಪಂಚಾಯತಿಯಲ್ಲಿ ಪ್ರಸ್ತುತ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಆದ್ದರಿಂದ, 1ನೇ ಎದುರುದಾರರನ್ನು ಬಿಲ್ ಕಲೆಕ್ಟರ್ ಕೆಲಸಕ್ಕೆ ನೇಮಿಸಿಕೊಂಡು, ಹಂಗಾಮಿ ಅಮಾನತ್ತು ಮಾಡಿ ನಂತರ ಪುನಃ ಕೆಲಸಕ್ಕೆ ತೆಗೆದುಕೊಂಡು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕಲಂ 113 ರಲ್ಲಿ ಗ್ರಾಮ ಪಂಚಾಯತಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೇ ಇರುವುದರಿಂದ, 3ನೇ ಎದುರುದಾರರ ಶಿಸ್ತು ಪ್ರಾಧಿಕಾರವಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರಾಮನಗರ ಇವರಿಗೆ ಶಿಫಾರಸ್ಸು ಮಾಡಿ 1 ಮತ್ತು 2ನೇ ಎದುರುದಾರರ ವಿರುದ್ಧ

3

ಸೂಕ್ತ ಕಾನೂನಿನ ಕ್ರಮ ತೆಗೆದುಕೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ರಡಿಯಲ್ಲಿ ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

13/10/17

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ

16/10